# Farewell Function

Hungund: "Our Institution memorises the valuable services rendered by shri. R.P. Mahendrakar, Head of the Department of Commerce and Shri. B.I. Ammajigol, F.D.C. who were superannuated on 31-05-2021" said Dr. Mahantesh kadapatti, the honorary secretary of V.M.V.V. Sanga Hungund.

He was speaking as the president of the farewell function organized at V.M.K.S.R. Vastrad Arts, Science and V.S Bellihal Commerce College Hungund in association with Internal Quality Assurance Cell (IQAC) on 31-05-2021. "Shri. R.P. Mahendrakar and Shri B.I. Ammajigol rendered their service to our institution with uttermost honesty, sincerity, and efficiency. Honouring the retired is the good tradition of our institution" he added. He wished them all the best in their future Shri. B. A. Kanthi, the faculty member of Commerce department & Smt. M.S. Bagalkote admired the valuable service of the retired.

The retired persons were felicitated by the management, the college, the Department of Commerce and Shri. B.M.Chalawadi the retired principal. Smt. S.K. Math, the principal cherished her memories that she had with the retired. She wished them all peace and prosperity in the future.

Shri Arunodaya Dudgi and shri.Ravi Huchanur, the directors of V.M.V.V. Sangha Hungund were present. Shri. B.B. Kadli the senior faculty member welcomed all and expressed the introductory remarks. Shri B.S. Hosamani Lecturer of Computer Science thanked all. Dr. Tippeswamy D.S. faculty member of Kannada anchored. All the teaching and non-teaching staff were present. The function was conducted by following the norms of Covid-19

Date: 31-05-2021

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

Principal
Principal
Vijaya Mahantesh Krupaposhit
S.R.Vastrad Arts, Science and Vijay
Shankarappa Bellihal Commerce College
Hungund-587118 (Dist:Bagalkot-Karnataka)

# ನಿವೃತ್ತರ ಬೀಳ್ಕೊಡಿಗೆ

ಹುನಗುಂದ: ದಿನಾಂಕ 31-05-2021 ರಂದು ಸೇವೆಯಿಂದ ನಿವೃತ್ತಗೊಂಡ ವಾಣಿಜ್ಯ ವಿಭಾಗದ ಮುಖ್ಯಸ್ಥರೂ ಆದ ಪ್ರೊ.ಆರ್.ಪಿ.ಮಹೇಂದ್ರಕರ ಹಾಗೂ ಪ್ರಥಮದರ್ಜೆ ಸಹಾಯಕರಾದ ಶ್ರೀ.ಬಿ.ಆಯ್ ಅಮ್ಮಜಿಗೋಳ ಅವರು ಸಲ್ಲಿಸಿದ ಸೇವೆಯನ್ನು ನಮ್ಮ ಸಂಸ್ಥೆಯು ಸದಾ ಸ್ಮರಿಸುತ್ತದೆ ಎಂದು ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿಗಳಾದ ಡಾ. ಮಹಾಂತೇಶ ಕಡಪಟ್ಟಿಯವರು ಹೇಳಿದರು.

ಸ್ಥಳೀಯ ವಿಜಯ ಮಹಾಂತೇಶ ಕೃಪಾಪೋಷಿತ ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ, ಹಾಗೂ ವ್ಹಿ.ಎಸ್,ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ವಿಭಾಗದ ಅಡಿಯಲ್ಲಿ ನಡೆದ ನಿವೃತ್ತರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷ ಸ್ಥಾನವಹಿಸಿ ಅವರು ಮಾತನಾಡಿದರು. ಮಹೇಂದ್ರಕರ ಹಾಗೂ ಅಮ್ಮಜಿಗೋಳ ಅವರು ಸಂಸ್ಥೆಗೆ ಪ್ರಾಮಾಣಿಕತೆ, ದಕ್ಷತೆ ಹಾಗೂ ಕರ್ತವ್ಯ ನಿಷ್ಠೆಯಿಂದ ಸೇವೆಗೈದಿದ್ದಾರೆ. ಅವರನ್ನು ಗೌರವಿಸಿ, ಸನ್ಮಾನಿಸಿ ಬೀಳ್ಕೊಡುವುದು ಸಂಸ್ಥೆಯ ಸತ್ ಸಂಪ್ರದಾಯವಾಗಿದೆ. ಅವರ ಭಾವಿ ಜೀವನವು ಸುಖ, ಶಾಂತಿ ನೆಮ್ಮದಿಯಿಂದ ಕೂಡಿರಲಿ, ಎಂದು ಶುಭ ಹಾರೈಸಿದರು. ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಬಿ.ಎ.ಕಂಠಿ ಹಾಗೂ ಕಛೇರಿಯ ಮುಖ್ಯಸ್ಥರಾದ ಶ್ರೀಮತಿ ಎಮ್.ಎಸ್.ಬಾಗಲಕೋಟಿ ಅವರು ನಿವೃತ್ತರ ಸೇವೆಯನ್ನು ಕೊಂಡಾಡಿದರು.

ಇದೇ ಸಂದರ್ಭದಲ್ಲಿ ನಿವೃತ್ತರನ್ನು ಸಂಸ್ಥೆಯ ಮಹಾವಿದ್ಯಾಲಯದ ಹಾಗೂ ವಾಣಿಜ್ಯ ವಿಭಾಗದ ವತಿಯಿಂದ ಸನ್ಮಾನಿಸಲಾಯಿತು. ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರಾದ ಪ್ರೊ.ಬಿ.ಎಂ.ಚಲವಾದಿಯವರು ನಿವೃತ್ತರನ್ನು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ.ಆರ್.ಪಿ. ಮಹೇಂದ್ರಕರ ಹಾಗೂ ಶ್ರೀ.ಬಿ.ಆಯ್.ಅಮ್ಮಜಿಗೋಳ ಅವರು ಸಂಸ್ಥೆಯ ಹಿರಿಮೆಯನ್ನು ವರ್ಣಿಸಿ ತಮ್ಮ ಸೇವಾ ಅನುಭವಗಳನ್ನು ಹಂಚಿಕೊಂಡರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.(ಶ್ರೀಮತಿ) ಎಸ್.ಕೆ.ಮಠ ಅವರು ನಿವೃತ್ತರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡು ಅವರ ಭಾವಿ ಜೀವನ ಸುಖಮಯವಾಗಿರಲಿ ಎಂದು ಶುಭ ಕೋರಿದರು.

ವೇದಿಕೆಯ ಮೇಲೆ ವಿಜಯ ಮಹಾಂತೇಶ ವಿದ್ಯಾರ್ಧಕ ಸಂಘದ ನಿರ್ದೇಶಕರುಗಳಾದ ಶ್ರೀ.ಅರುಣ ದುದ್ಗಿ ಹಾಗೂ ಶ್ರೀ ರವಿ ಹುಚನೂರ ಅವರು ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ.ಬಿ.ಬಿ.ಕಡ್ಲಿಯವರು ಸಭೆಗೆ ಎಲ್ಲರನ್ನು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ.ಬಿ.ಎಸ್.ಹೊಸಮನಿಯವರು ವಂದಿಸಿದರು. ಡಾ:ಡಿ.ಎಸ್.ತಿಪ್ಪೇಸ್ವಾಮಿಯವರು ಕಾರ್ಯಕ್ರಮ ನಿರೂಪಿಸಿದರು. ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕೇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಕಾರ್ಯಕ್ರಮವನ್ನು ಕೋವಿಡ್-19 ನಿಯಮಗಳನ್ನು ಅನುಸರಿಸಿ ನಡೆಸಲಾಯಿತು.

ದಿನಾಂಕ:31-05-2021

ಪ್ರಾಚಾರ್ಯರು.

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

Principal
Vijaya Mahantesh Krupaposhit
S.R.Vastrad Arts, Science and Vijay
Shankarappa Bellihal Commerce College
Hungund-587118 (Dist:Bagalkot-Karnataka)